ಹಕ್ಕುಚ್ಯುತಿ ಬಗ್ಗೆ ನಿರ್ಣಯ ಮಂಡಿಸಬೇಕು ಅಂತ ಇಚ್ಛಿಪಟ್ಟಾಗ ಮೊಟ್ಟಮೊದಲು ಪ್ರಶ್ನೋತ್ತರ ಆದ ಮೇಲೆ ಅದಕ್ಕೆ ಅವಕಾಶ ಕೊಡಬೇಕಾಗುತ್ತದೆ. ನಂತರ ಉಳಿದ ವಿಷಯಗಳನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು:– ಆಯಿತು.

ಹಕ್ಕು ಚ್ಯುತಿ ನಿರ್ಣಯ

ಸಾರಿಗೆ ಸಚಿವರು ಬಸ್ ದರವನ್ನು ಇಳಿಸುತ್ತೇನೆನ್ನುವ ಭರವಸೆ ಕುರಿತು

ಶ್ರೀ ಶಿವಾನಂದ ಎಚ್. ಕೌಜಲಗಿ:– ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಮಾನ್ಯ ಸಾರಿಗೆ ಸಚಿವರ ಮೇಲೆ ಒಂದು ಹಕ್ಕುಚ್ಯುತಿಯನ್ನು ಕಳಿಸಿಕೊಟ್ಟಿದ್ದೇನೆ. ಅದು ಏನೆಂದರೆ, ವಿಧಾನಸಭೆಯಲ್ಲಿ ಅವರು ಬಸ್ ಪ್ರಯಾಣದ ದರವನ್ನು ಶೇಕಡ 7 ಪರ್ಸೆಂಟ್‌ನಷ್ಟು ಇಳಿಸುತ್ತೇನೆ ಎಂದು ಅವರು ಹೇಳಿದ್ದರು. ಆದರೆ ಇವತ್ತಿನ ದಿವಸ ವಿಧಾನಸಭೆಯಲ್ಲಿ ಅವರು ಕೊಟ್ಟಂಥ ಆಶ್ವಾಸನೆ ಪ್ರಕಾರ ಕೆ.ಎಸ್.ಆರ್.ಟಿ.ಸಿ. ಯವರು ಬಸ್ ಪ್ರಯಾಣ ದರವನ್ನು ಎಕ್ಸ್‌ಪ್ರೆಸ್ ಬಸ್‌ಗಳಿಗೆ ಮತ್ತು ಸುಖಿಪಿಹಾರಿ ಬಸ್ಸುಗಳಿಗೆ ಇಳಿಸಿರುವುದಿಲ್ಲ. ಇದು ನಂಬರ್ ವನ್. ಎರಡನೇಯದಾಗಿ ಸ್ಟೇಜ್ – 2 ಎಕ್ಸ್‌ಪ್ರೆಸ್ ಬಸ್‌ಗಳಿಗೆ ಯಾವ ಪ್ರಕಾರ ಇಳಿಸಬೇಕಾಗಿತ್ತು ಅದಕ್ಕೆ ಸಹಿತ ಇಳಿಸಿರುವುದಿಲ್ಲ. ಅವರು ಕೊಟ್ಟಂಥ ಒಂದು ಗ್ರಾಮೀಣ ಸಾಮಾನ್ಯ ಬಸ್ಸು ಮತ್ತು ಎಕ್ಸ್‌ಪ್ರೆಸ್ ಬಸ್ಸುಗಳ ಹಾಗೂ ಮುನ್ನೂರು ಕಿಲೋಮೀಟರ್ ಅಂತರದ ಅರೆಸುಖಿಹಾರಿ ಬಸ್ಸುಗಳ ಪ್ರಯಾಣದರದ ಪರಿಕೆಯಲ್ಲಿ ಶೇಕಡಾ ಏಳರಷ್ಟು ಕಡಿತವಾಗಿರುವುದಾಗಿ ಸರ್ಕಾರ ಇಂದು ಉಭಯಸದನಗಳಲ್ಲಿ ಪ್ರಕಟಿಸಿತು. ಇದು ಪ್ರಜಾವಾಣಿ ಪತ್ರಿಕೆಯಲ್ಲಿ 17–2–93ರಂದು ಪ್ರಕಟವಾಗಿದೆ. ಆದಕಾರಣ ಇದು ಪ್ರಕಟವಾಗಿರುವುದರ ಕಾರಣ ಇವತ್ತಿನ ದಿವಸ ನಾವು ರಾಜ್ಯದಲ್ಲಿ 7ಪರ್ಸೆಂಟ್ ಈ ಎಕ್ಸ್‌ಪ್ರೆಸ್ ಬಸ್ಸುಗಳಿಗೆ ಸುಖಿಪಿಹಾರ ಬಸ್ಸುಗಳಿಗೆ ಇಳಿಸಿಲ್ಲದಿರುವುದನ್ನು ನೋಡಬೇಕಾಗುತ್ತದೆ. ಉದಾಹರಣೆಗೆ ಬೈಲಹೊಂಗಲದಿಂದ ಬೆಂಗಳೂರಿಗೆ ಲಕ್ಷುರಿ ಬಸ್ಸಿನಲ್ಲಿ 113 ರೂಪಾಯಿಗಳನ್ನು ಮೊದಲು ತೆಗೆದುಕೊಳ್ಳುತ್ತಿದ್ದರು. ನಂತರ ದರ ಹೆಚ್ಚಳವಾದ ಮೇಲೆ 142 ರೂಪಾಯಿ ಆಯಿತು. ಮೊನ್ನೆ ಏಳು ಪರ್ಸೆಂಟ್ ಆದನಂತರ ಕಡಿಮೆಯಾಗಬೇಕಿತ್ತು. ಆದರೆ ಇವತ್ತಿನ ತನಕ 142ರೂಪಾಯಿಗಳನ್ನೇ ಅವರು ತೆಗೆದುಕೊಳ್ಳುತ್ತಿದ್ದಾರೆ.

ಎರಡನೆಯದಾಗಿ ಬೈಲಹೊಂಗಲದಿಂದ ಮರಕುಂಬಿಗೆ ಹೋಗುವ ಎಕ್ಸ್‌ಪ್ರೆಸ್ ಬಸ್ಸಿಗೆ ಮೊದಲು 1 ರೂಪಾಯಿ 4 ಆಣೆ ತೆಗೆದುಕೊಳ್ಳುತ್ತಿದ್ದರು. ದರ ಹೆಚ್ಚಾದ ನಂತರ ಅದು 2 ರೂಪಾಯಿ ಆಯಿತು. ಆದರೆ, ಇವತ್ತಿನವರೆಗೂ ಆ ಬಸ್ಸಿನವರು ಎರಡು ರೂಪಾಯಿಯನ್ನೇ ತೆಗೆದುಕೊಳ್ಳುತ್ತಿದ್ದಾರೆ. ಮೂರನೆಯದಾಗಿ, ಬೈಲಹೊಂಗಲದಿಂದ ಬೆಳವಡಿಗೆ ಹೋಗುವ ಬಸ್ಸಿಗೆ 2 ರೂಪಾಯಿ 4 ಆಣೆ ತೆಗೆದುಕೊಳ್ಳುತ್ತಿದ್ದರು, ಮುಂದೆ ಈ ಎಕ್ಸ್‌ಪ್ರೆಸ್ ಬಸ್ಸಿಗೆ 3 ರೂಪಾಯಿ ಆಯಿತು. ಇವತ್ತಿನವರೆಗೂ ಈ 3 ರೂಪಾಯಿಗಳನ್ನೇ ತೆಗೆದುಕೊಳ್ಳುತ್ತಿದ್ದಾರೆ. ಸ್ಟೇಜ್ ನಂ. 1 ಅಂಡ್ 2 ಯಾವುದೇ ಎಕ್ಸ್‌ಪ್ರೆಸ್ ಬಸ್ಸಿಗೂ, ಸರ್ಕಾರ ದರವನ್ನು ಕಡಿಮೆ ಮಾಡಿರುವುದಿಲ್ಲ. ಸುಖಿಹಾರಿ ಬಸ್ಸಿನಲ್ಲಿ 300 ಕಿಲೋಮೀಟರ್‌ಗೆ ಹೆಚ್ಚಿನ ಪ್ರಯಾಣಕ್ಕೆ ಸರ್ಕಾರದವರು 7 ಪರ್ಸೆಂಟ್ ಕಡಿಮೆ ಮಾಡುತ್ತೇವೆಂದು ಹೇಳಿದ್ದರೂ ಸಹಿತ, ಇವತ್ತಿನವರೆಗೆ ಕಡಿಮೆ ಮಾಡಿರುವುದಿಲ್ಲ. ಆದಕಾರಣ, ಸರ್ಕಾರದವರು ವಿಧಾನ ಸಭೆಯಲ್ಲಿ ಏನು ಆಶ್ವಾಸನೆ ಕೊಟ್ಟಿದ್ದರು, ಆ ಆಶ್ವಾಸನೆ ಪ್ರಕಾರ ನಡೆಯುಕೊಂಡಿರುವುದಿಲ್ಲ. ಕಾರಣ ಹಕ್ಕುಚ್ಯುತಿ ಆಗಿದೆ. ಅವರು ಈ ಸದನವನ್ನು ತಪ್ಪು ದಾರಿಯಲ್ಲಿ ಇಳಿಸಿದ್ದಾರೆ ಮತ್ತು ನಿಜವಾಗಿಯೂ ಸರ್ಕಾರವು ಟೇಟಿಂಗ್ ಮಾಡುತ್ತಿದೆ ಎಂದು ಹೇಳಿದರೂ ಸಹಿತ ತಪ್ಪಾಗುವುದಿಲ್ಲ. ಆದಕಾರಣ ಸರ್ಕಾರದವರು ಮೋಸ ಮಾಡಿದ್ದಾರೆ. ಸಾರಿಗೆ ಸಚಿವರ ವಿರುದ್ಧ ಏನು ಹಕ್ಕುಚ್ಯುತಿ ಕಳುಹಿಸಿದ್ದೇನೆ ಇದನ್ನು ತಾವು ಆಡಿಟ್ ಮಾಡಿ, ಇದನ್ನು ನೇರವಾಗಿ ಹಕ್ಕುಚ್ಯುತಿ ಸಮಿತಿಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ

1) ಮಾಸೂರು ಗ್ರಾಮದಲ್ಲಿ ಪಡಿತರ ಸಕ್ಕರೆಯ ಕಳ್ಳ ಮಾರಾಟ

ಶ್ರೀ ಕೆ. ಎಸ್. ಈಶ್ವರಪ್ಪ:- ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಟಿ.ಎ.ಪಿ.ಸಿ.ಎಂ.ಎಸ್.ಗಳು ಮತ್ತು ಸ್ಯಾಯಬೆಲೆ ಅಂಗಡಿಗಳಲ್ಲಿ ಅನೇಕ ಕಡೆ ಸಕ್ಕರೆ, ಎಣ್ಣೆ ಈ ರೀತಿ ಬಳಕೆದಾರರು ಬಳಸುವಂಥ ವಸ್ತುಗಳನ್ನು ಕದ್ದು ಮಾರಾಟ ಮಾಡುವುದು ಸರ್ವೇ ಸಾಮಾನ್ಯವಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ರೀತಿಯ ಸವಾಲು ರೂಪದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಇವತ್ತು ಅನೇಕ ಉತ್ಸಾಹಿ ಯುವಕರು, ಈ ರೀತಿ ಕದ್ದು ಮಾರಾಟ ಮಾಡುತ್ತಿದ್ದು, ಮೂರು ಚೀಲ ಸಕ್ಕರೆಯನ್ನು ಹೊಡೆದು, ಹಿರೇಕೆರೂರು ತಾಲ್ಲೂಕು ಮಾಸೂರು ಗ್ರಾಮದಲ್ಲಿ ಕೊಟ್ಟಿದ್ದಾರೆ. ಇದನ್ನು ಸರ್ಕಾರದವರು ಯಾವ ರೀತಿಯಾಗಿ ಚಾಲೆಂಜ್ ಆಗಿ ಸ್ವೀಕಾರ ಮಾಡಿ, ಸಂಬಂಧಪಟ್ಟ ಟಿ.ಎ.ಪಿ.ಸಿ.ಎಂ.ಎಸ್. ಅಧಿಕಾರಿಗಳ ವಿರುದ್ಧ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ಹೇಳಬೇಕು. ದಿನಾಂಕ: 5-3-93ರಂದು ಶುಕ್ರವಾರ ರಾತ್ರಿ 8-30ಕ್ಕೆ ಟಿ.ಎ.ಪಿ.ಸಿ.ಎಂ.ಎಸ್.ನಿಂದ 3 ಚೀಲ ಸಕ್ಕರೆ ಹೊರಗಡೆ ಹೋಗುತ್ತಿರುವುದನ್ನು.....

ಒಬ್ಬ ಸದಸ್ಯರು:- ಆ ಕಡೆಯಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲ.....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ಮಂತ್ರಿಗಳು ಯಾರೂ ಇಲ್ಲ ಎಂದರೆ ನಾನೇನು ಮಾಡಲಿ, ನನ್ನ ವಿಚಾರವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಆರ್. ಪಿ. ದೇಶಪಾಂಡೆ:- ತಾವು ನಮಗೆ ಅವಕಾಶ ಕೊಡುತ್ತೀರಿ. ತಾವು ಅವಕಾಶ ಕೊಟ್ಟಾಗ, ಇಲ್ಲಿ ಕೇಳುವವರು, ಯಾರೂ ಇಲ್ಲ. ಯಾವುದೇ ಮಂತ್ರಿಗಳು ಇಲ್ಲ. ಯಾವ ಕಡೆ ಚರ್ಚೆಯಾಗುತ್ತಿದೆ, ಯಾವ ವಿಷಯದ ಚರ್ಚೆಯಾಗುತ್ತಿದೆ ಎನ್ನುವುದನ್ನು ಕೇಳುವವರೇ ಇಲ್ಲ.

ಶ್ರೀ ವಾಟಾಳ್ ನಾಗರಾಜ್:- ಈ ವಿಷಯವನ್ನು ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಹೇಳುತ್ತಿದ್ದೇವೆ. ಸಚಿವರು ಇಲ್ಲದಿದ್ದರೆ, ಇಲ್ಲಿಯ ಪರಿಸ್ಥಿತಿ ಏನು ? ನಾವು ಯಾರ ಮುಂದೆ ಹೇಳಬೇಕು. ಪ್ರತಿಯೊಂದು ವಿಷಯಗಳಿಗೂ, ಇಲ್ಲಿ ಯಾರೂ ಒಬ್ಬರೂ ಇಲ್ಲ. ಎಲ್ಲದಕ್ಕೂ ಉಪ ಮುಖ್ಯಮಂತ್ರಿಗಳೇ ಹೇಳಬೇಕು. ಇದೆಂಥ ನಿಯಮ, ಇದು ಸರಿಯಲ್ಲ. ಈ ಸಭೆಯ ಘನತೆಗೆ ಸರಿಯಲ್ಲ. ಇವತ್ತು ಆಹಾರ ಮಂತ್ರಿಗಳು ಅಥವಾ ಸಂಬಂಧಪಟ್ಟ ಮಂತ್ರಿಗಳು ಗಂಭೀರವಾಗಿ ಕಾಲ್ತುಕೊಳ್ಳಬೇಕು, ಸಂಬಂಧಪಟ್ಟ ವಿಚಾರವನ್ನು ಕೇಳಬೇಕು. ಅದು ಬಿಟ್ಟು ಎಲ್ಲವನ್ನೂ ಒಬ್ಬರ ಮೇಲೆ ಹೊರಿಸುವುದು ಸಂತೋಷ ತರುವ ವಿಷಯವಲ್ಲ. ಮತ್ತು ಈ ಸದನಕ್ಕೆ ಗೌರವ ತರುವಂಥ ವಿಷಯವಲ್ಲ.

ಶ್ರೀ ಎಸ್.ಎಂ. ಕೃಷ್ಣ:- ಮಾನ್ಯ ಅಧ್ಯಕ್ಷರೇ, ತಾವು ದಯಮಾಡಿ ಸರ್ಕಾರಕ್ಕೆ ಸೂಕ್ತ ನಿರ್ದೇಶನ ಕೊಡಬೇಕು. ಆಹಾರ ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಈಶ್ವರಪ್ಪನವರು ಏನು ಪ್ರಸ್ತಾವನೆ ಮಾಡಿದ್ದಾರೆ, ಅದನ್ನು ನಮಗೆ ಮೊದಲೇ ತಿಳಿಸಿದ್ದರೆ, ನಾವು ಆಹಾರ ಮಂತ್ರಿಗಳನ್ನು ಇಲ್ಲಿಗೆ ಕರೆಸುತ್ತಿದ್ದೆವು, ಅವರು ಈಗ ವಿಧಾನಪರಿಷತ್ತಿನಲ್ಲಿರಬಹುದು....

ಶ್ರೀ ಬಸವರಾಜ ರಾಯರೆಡ್ಡಿ:- ಇಲ್ಲಿ ಸಭೆ ನಡೆಯುವಾಗ, ಮಂತ್ರಿಗಳಿಗೆ ಬೇರೆ ಕಾರ್ಯಕ್ರಮ ಏನಿದೆ ?